**ಉಪನಿರ್ದೇಶಕರು (ಆಡಳಿತ) ರವರ ಕಚೇರಿ**

**ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು**

---

**2022–23 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಉತ್ತಮಪಡಿಸಲು ರಚಿಸಲಾಗಿರುವ ಅಭ್ಯಾಸ ಪತ್ರಿಕೆಗಳು**

**ವಿಷಯ: 62K– ತೃತೀಯ ಭಾಷೆ – ಕನ್ನಡ**

**ಗರಿಷ್ಠ ಅಂಕಗಳು: 80** | **ಸಮಯ : 03.00 ಗಂಟೆಗಳು**

****************************************************************************************

**ಅಭ್ಯಾಸ ಪತ್ರಿಕೆ–3**

****************************************************************************************

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : 8x1=8**

1. ಕ ಗ ದ ಪ – ಇವು
   ಎ) ಅನುನಾಸಿಕಗಳು ಬಿ) ಅಲ್ಪಪ್ರಾಣಗಳು
   ಸಿ) ಮಹಾಪ್ರಾಣಗಳು ಡಿ) ವಿಸರ್ಗಗಳು
2. ಕೆಳಗಿನವುಗಳಲ್ಲಿ ತತ್ಪುರಷ ಸಮಾಸಕ್ಕೆ ಉದಾಹರಣೆ
   ಎ) ಹಳೆಗನ್ನಡ ಬಿ) ಒಗ್ಗಟ್ಟು
   ಸಿ) ಅರಮನೆ ಡಿ) ಕೈಮುಗಿ
3. 'ಅಂತರಂಗ' ಇದರ ವಿರುದ್ಧಾರ್ಥಕ ರೂಪ
   ಎ) ತರಂಗ ಬಿ) ಬಹಿರಂಗ
   ಸಿ) ರಣರಂಗ ಡಿ) ಸುರಂಗ
4. ಕೆಳಗಿನವುಗಳಲ್ಲಿ ಇಂಗ್ಲೀಷಿನಿಂದ ಕನ್ನಡಕ್ಕೆ ಬಂದು ಬಳಕೆಯಾಗುತ್ತಿರುವ ಪದ
   ಎ) ಗ್ರಾಮ ಬಿ) ಭೂಮಿ
   ಸಿ) ಹೋಟೆಲ್ ಡಿ) ನಗರ
5. ಒಂದೇ ಪೂರ್ಣ ಕ್ರಿಯಾಪದದೊಡನೆ ಸ್ವತಂತ್ರ ಮತ್ತು ಖಚಿತ ಅರ್ಥ ಕೊಡುವ ವಾಕ್ಯವೇ
   ಎ) ಸಾಮಾನ್ಯ ಬಿ) ಸಂಯೋಜಿತ
   ಸಿ) ಅಸಾಮಾನ್ಯ ಡಿ) ಮಿಶ್ರ
6. ಆಕಾಶದಲ್ಲಿ ಹಕ್ಕಿಗಳು ಚಿಲಿಪಿಲಿ ಗುಟ್ಟುತ್ತಾ ಸಾಲುಸಾಲಾಗಿ ಹಾರಾಡುವ ದೃಶ್ಯ ಮನೋಹರವಾಗಿದೆ – ಈ ವಾಕ್ಯದಲ್ಲಿರುವ ಅನುಕರಣಾವ್ಯಯ ಪದ
   ಎ) ಹಾರಾಡುವ ಬಿ) ಚಿಲಿಪಿಲಿ
   ಸಿ) ಮನೋಹರ ಡಿ) ಸಾಲುಸಾಲಾಗಿ
7. ಶರೀಫರು ಆಸಕ್ತಿಯಿಂದ ತಮ್ಮ ಗ್ರಾಮದಲ್ಲಿ ಶಿಕ್ಷಕ ವೃತ್ತಿಯನ್ನು ಮಾಡಿದರು– ಈ ವಾಕ್ಯದಲ್ಲಿರುವ ತೃತೀಯಾ ವಿಭಕ್ತಿಪ್ರತ್ಯಯ ಪದ
   ಎ) ಶರೀಫರು ಬಿ) ವೃತ್ತಿಯನ್ನು
   ಸಿ) ಗ್ರಾಮದಲ್ಲಿ ಡಿ) ಆಸಕ್ತಿಯಿಂದ
8. ಕೆಳಗಿನವುಗಳಲ್ಲಿ ಭೂತಕಾಲದ ಕಾಲಸೂಚಕ ಪ್ರತ್ಯಯ
   ಎ) ಉತ್ತ ಬಿ) ಉವ
   ಸಿ) ದ ಡಿ) ವ

**II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ : 4 x 1=4**

9. ಕಿತ್ತೂರಿನ ರಾಣಿ : ಚೆನ್ನಮ್ಮ :: ಉಲ್ಲಾಳದ ರಾಣಿ : ----------
10. ರೂಪದರ್ಶಿ : ಕೆ.ವಿ.ಅಯ್ಯರ್ :: ರತ್ನನ ಪದಗಳು : -----------
11. ರಕ್ತಗಾಲಿನ ನಮ್ಮ ಪಾಲಿನ : ಹಾಡ ಬರೆಯತೇವ :: ಕ್ರಾಂತಿ ಕೆಂಡದ ಕುಂಡ ಹೊತ್ತು ನಾವು : ---------
12. ಮುದುಡಿ ಹೋಗುವುದು : ಮತಿ :: ನುಚ್ಚು ನೂರಾಗುವುದು : -----------

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 4 x 1=4**

13. ಕನ್ನಡದ ದೀಕ್ಷೆಯನ್ನು ಬೀಚಿಯವರು ಸ್ವೀಕರಿಸಿದ ಶುಭಮುಹೂರ್ತ ಯಾವುದು?
14. ರೈತನು ಮಳೆಯನ್ನು ಏನೆಂದು ಕರೆದಿದ್ದಾನೆ?
15. ಈರಪ್ಪ ಎಂ ಕಂಬಳಿಯವರು ಯಾವ ಊರಿಗೆ ಹೊರಟಿದ್ದರು?
16. ವಿಶುವಿನ ಎದೆಯಲ್ಲಿ ಎಂದೆಂದಿಗೂ ನಿಲ್ಲದಂತೆ ಮೊಳಗುತ್ತಿದ್ದ ಪದ ಯಾವುದು?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 8x2=16**

17. ಮಿನಿ ಪೊಲೀಸ್ ನಗರದ ಪೊಲೀಸರು ಗೊರೂರರನ್ನು ಉಪಚರಿಸಿದ ಬಗೆ ಹೇಗೆ?
18. ಪೊಲೀಸರು ಗೊರೂರರನ್ನು ಲಾಕಪ್ಪಿನಲ್ಲಿ ಮಲಗಿಸಲು ಕಾರಣವೇನು?
19. ಗಾಂಧೀಜಿಯವರು ಅವಾಕ್ಕಾಗಲು ಕಾರಣವಾದ ಘಟನೆಯನ್ನು ನಿಮ್ಮ ಮಾತಿನಲ್ಲಿ ಬರೆಯಿರಿ.
20. ರಾಮಸಿಂಗನಿಗೂ ಶಿಪಾಯಿಗಳಿಗೂ ನಡೆದ ಸಂಭಾಷಣೆಯ್ನು ವಿವರಿಸಿರಿ.
21. ಭೌಗೋಳಿಕವಾಗಿ ಭಾರತೀಯರೆಲ್ಲಾ ಒಂದೇ ಎಂದು ನಿಸಾರ್ ಅಹಮದ್ ಅವರು ಹೇಗೆ ನಿರೂಪಿಸಿದ್ದಾರೆ? ವಿವರಿಸಿರಿ.
22. ಅಂತರಂಗ ಮತ್ತು ಬಹಿರಂಗವನ್ನು ಶುದ್ಧಿಯಾಗಿಡುವುದು ಹೇಗೆ ಎಂದು ಬಸವಣ್ಣನವರು ಹೇಳಿದ್ದಾರೆ?
23. ದೇವಲೋಕ, ಮರ್ತ್ಯಲೋಕವೆಂಬುದು ಬೇರೆ ಎಲ್ಲೂ ಇಲ್ಲವೆಂಬುದನ್ನು ಬಸವಣ್ಣನವರು ಹೇಗೆ ತಿಳಿಸಿದ್ದಾರೆ?
24. ಸೋಮೇಶ್ವರ ಶತಕದಲ್ಲಿ ಕವಿ ಯಾವ ಗುಣಗಳನ್ನು ಹೊಂದಿದವರು ಯಾವ ಹೆಸರಿಗೆ ಅರ್ಹರಾಗುತ್ತಾರೆ ಎಂಬುದನ್ನು ಹೇಗೆ ನಿರೂಪಿಸಿದ್ದಾರೆ? ವಿವರಿಸಿರಿ

**V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭದೊಡನೆ ಸ್ವಾರಸ್ಯವನ್ನು ಬರೆಯಿರಿ : 2x 3=6**

25 "ನೀವು ದಯಮಾಡಿ ಇದನ್ನು ಓದಿ ನಿಮ್ಮ ಅಭಿಪ್ರಾಯವನ್ನು ಹೇಳಿ"
26. "ಸಾವಿರಾರು ಕೆರೆ ತುಂಬಿ".

**VI. ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 4x3=12**

27. ಕೊಡಗಿನ ಗೌರಮ್ಮನವರ ಸಾಹಿತ್ಯ ಸೃಷ್ಟಿಗೆ ಪೂರಕವಾದ ವಿಚಾರಗಳನ್ನು ಕುರಿತು ಬರೆಯಿರಿ.
28. ಸೋಮಣ್ಣನು ಕುಲಕರ್ಣಿಯ ಕೃತ್ಯವನ್ನು ಹೇಗೆ ಖಂಡಿಸಿದನು? ವಿವರಿಸಿರಿ.
29. ಗ್ರಂಥಾಲಯದ ಬಗ್ಗೆ ಸಿ.ಪಿ.ಕೆ. ಅವರು ವ್ಯಕ್ತಪಡಿಸಿರುವ ಭಾವನೆಗಳನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.
30. "ಮನುಜ ಜಾತಿ ತಾನೊಂದೆ ವಲಂ' ಎಂಬ ಭಾವನೆಯನ್ನು ನಿಸಾರ್ ಅಹಮದ್ ಅವರು ವ್ಯಕ್ತಪಡಿಸಿರುವ ರೀತಿಯನ್ನು ಮೆಚ್ಚುವಂಥದ್ದು, ಏಕೆ?

**VII. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ ಮತ್ತು ಕೃತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ : 2x 3=6**

31. ವಿಜಯಲಕ್ಷ್ಮಿ ಬಾಳೇಕುಂದ್ರಿ
32. ಸತೀಶ ಕುಲಕರ್ಣಿ

**VIII. ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ: 1x3=3**

33. "ಮಾಡಿದ್ದು ಉಣ್ಣೋ ಮಹಾರಾಯ"

**ಅಥವಾ**

"ಕೈ ಕೆಸರಾದರೆ ಬಾಯಿ ಮೊಸರು"

**IX. ಕೆಳಗಿನ ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 1x 4=4**

34. ಶರೀಫರು ಮತ್ತು ಗೋವಿಂದ ಭಟ್ಟರ ನಡುವಿನ ಅನ್ಯೋನ್ಯತೆಯನ್ನು ಕುರಿತು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಅಥವಾ

ಕರ್ಬಲಾ ಮತ್ತು ಅಲಾವಿ ಆಚರಣೆಗಳನ್ನು ಕುರಿತು ಬರೆಯಿರಿ.

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ: 1x 4=4**

35. ಕಂಚುಗಾರನ -----------------------------------
-----------------------------------------
-----------------------------------------
-------------------------------- ಮಾಡುವುದು

**ಅಥವಾ**

ನಾನು ------------------------------------

------------------------------------------

------------------------------------------

------------------------------ ಕಾರ್ಯಗಳೆಲ್ಲವು

**XI. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : 4x1=4**

ತಲಕಾಡಿನ ಇತಿಹಾಸದಲ್ಲಿ ಗಂಗರ ಇತಿಹಾಸ, ಜೈನಧರ್ಮದ ವಿವರಣೆ, ಕನ್ನಡ ಸಾಹಿತ್ಯದ ಕಥನ, ಹೊಯ್ಸಳ ವಾಸ್ತುಶಿಲ್ಪದ ವಿವರಣೆ ಎಲ್ಲವೂ ಇದೆ. ಎಲ್ಲಕ್ಕೂ ಮಿಗಿಲಾಗಿ ಕನ್ನಡವೇ ಧರ್ಮ, ಕನ್ನಡವೇ ಬಾಳಿನ ಪರಿಪೂರ್ಣತೆಯೆಂದು ಬಗೆದು ಅದಕ್ಕಾಗಿ ಹೋರಾಡಿ ಮಡಿದ ವೀರರ ಉಜ್ವಲ ಚರಿತ್ರೆ ಇದೆ. ಗಂಗರ ರಾಜ್ಯ ಗಂಗವಾಡಿ ಎಂದು ಹೆಸರಾಗಿದೆ. ಅವರ ಮೊದಲ ರಾಜಧಾನಿ ಕೋಲಾರ. ಸುಮಾರು ಕ್ರಿ.ಶ. 500ರ ಹೊತ್ತಿಗೆ ಕೋಲಾರದಿಂದ ಹರಿವರ್ಮ ರಾಜಧಾನಿಯನ್ನು ತಲಕಾಡಿಗೆ ತಂದನು. ಅಲ್ಲಿಂದ ಮುಂದಕ್ಕೆ ಐದು ಶತಮಾನಗಳವರೆಗೆ ಅಂದರೆ ಹತ್ತನೆಯ ಶತಮಾನದವರೆಗೂ ಗಂಗರು ಆಳ್ವಿಕೆ ನಡೆಸಿದರು. ಮಾರಸಿಂಹ, ರಾಚಮಲ್ಲ, ರಕ್ಕಸಗಂಗರ ತಲಕಾಡು ಪುಣ್ಯಭೂಮಿ. ಅವರೊಂದಿಗೆ ಕೊನೆಯವರೆಗೂ ಒಂದು ಹಿರಿಯ ಜೀವ ಇದ್ದಿತು. ಅವನ ಹೆಸರು ಚಾವುಂಡರಾಯ. ಆತ ಮಾರಸಿಂಹ, ರಾಚಮಲ್ಲ, ರಕ್ಕಸಗಂಗರ ಮಂತ್ರಿ. ಅವನನ್ನು ಜನ ಹೆಸರು ಹಿಡಿದು ಕರೆಯುತ್ತಿರಲಿಲ್ಲ. 'ರಾಯ', 'ಅಣ್ಣ' ಎಂದು ಸಂಬೋಧಿಸುತ್ತಿದ್ದರು. ಅವನಿಗೆ ಕನ್ನಡದ ಏಳ್ಗೆಯ ಹಂಬಲವೇ ಹಂಬಲ. ಸ್ವತಃ ಕವಿ 'ಚಾವುಂಡರಾಯ ಪುರಾಣ' ಎಂಬ ಹೆಸರಿನ ಅರವತ್ತಮೂರು ಪುಣ್ಯ ಪುರುಷರ ಚರಿತ್ರೆ, ಅವನು ಕನ್ನಡಕ್ಕೆ ಕೊಟ್ಟ ಕಾಣಿಕೆ.

36. ಪ್ರಶ್ನೆಗಳು :

1. ತಲಕಾಡಿನ ಇತಿಹಾಸದಲ್ಲಿ ಯಾವುದರ ವಿವರಣೆ ಇದೆ?
2. ರಾಜಧಾನಿಯನ್ನು ತಲಕಾಡಿಗೆ ತಂದವರು ಯಾರು?
3. ಜನರು ಚಾವುಂಡರಾಯನನ್ನು ಏನೆಂದು ಸಂಬೋಧಿಸುತ್ತಿದ್ದರು?
4. ಕವಿಯಾಗಿ ಚಾವುಂಡರಾಯ ಕನ್ನಡಕ್ಕೆ ಕೊಟ್ಟ ಕಾಣಿಕೆ ಯಾವುದು?

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ : 4x 1=4**

37. ಆನ್‌ಲೈನ್ ಶಿಕ್ಷಣದಲ್ಲಿ ಸಂಪರ್ಕ ಮಾಧ್ಯಮಗಳ ಪಾತ್ರ

**ಅಥವಾ**

ದೂರದರ್ಶನದ ಒಳಿತು ಮತ್ತು ಕೆಡುಕುಗಳು

**XIII. ಕೆಳಗಿನವುಗಳಲ್ಲಿ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : 5x 1=5**

38. ನಿಮ್ಮನ್ನು ಮೂಡಿಗೆರೆಯ ನಿವಾಸಿ ಶಶಾಂಕ್ ಎಂದು ಭಾವಿಸಿಕೊಂಡು, ನಿಮ್ಮೂರಿನಲ್ಲಿ ಸಾರ್ವಜನಿಕ ಗ್ರಂಥಾಲಯವನ್ನು ತೆರೆಯುವಂತೆ ಕೋರಿ, ಚಿಕ್ಕಮಗಳೂರು ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಕಂಪ್ಲಿಯ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿ ಸಂದೇಶ್ ಎಂದು ಭಾವಿಸಿಕೊಂಡು, ಶಾಲಾ ಪ್ರವಾಸದ ಅನುಭವವನ್ನು ವಿವರಿಸುತ್ತ ಮೈಸೂರಿನಲ್ಲಿರುವ ನಿಮ್ಮ ಗೆಳೆಯ ಸಂತೋಷನಿಗೆ ಒಂದು ಪತ್ರವನ್ನು ಬರೆಯಿರಿ.

◉◉◉◉◉